ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/69/ಎಜಿಪಿ/ಬಸ್ಥಾವಿ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 30.09.2022.

**ಸುತ್ತೋಲೆ**

ವಿಷಯ : ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಉನ್ನತ ಶೈಕ್ಷಣಿಕ ಹಂತ 11, 12, 13ಎ ಹಾಗೂ 14ರಲ್ಲಿ ಪದೋನ್ನತಿಗೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.

ಉಲ್ಲೇಖ:

1. ಸರ್ಕಾರದ ದಿನಾಂಕ: ಇಡಿ/123/ಡಿಸಿಇ/2020, ದಿನಾಂಕ: 02.03.2021 ಮತ್ತು ಈ ಕಛೇರಿಯ ದಿ: 16.03.2021ರ ಪರಿಚಾಲನ ಆದೇಶ.
2. ಸರ್ಕಾರದ ದಿನಾಂಕ : 24.12.2009ರ ಸಂಖ್ಯೆ: ಇಡಿ 37 ಯುಎನ್ಇ 2009ರ ಆದೇಶ. ಮತ್ತು ಸಂಖ್ಯೆ: ಇಡಿ/483/ಯುಎನಿ/2017 ದಿನಾಂಕ: 16.03.2019 ಈ ಆದೇಶ ಹಾಗೂ ದಿನಾಂಕ: 21.10.2019ರ ಪತ್ರ.
3. ಯು.ಜಿ.ಸಿ.ಯ ದಿನಾಂಕ :30.06.2010ರ ಸಂಖ್ಯೆ : ಎಫ್3-1/ 2009 ರ ಅಧಿಸೂಚನೆ.
4. ಯು.ಜಿ.ಸಿ. ಅರೆ ಸರ್ಕಾರಿ ಪತ್ರ ಸಂಖ್ಯೆ: ಎಫ್1-2/2009 (EC/PS)V(i)vol-II, ದಿ:14.06.2013 ರೊಂದಿಗೆ ಲಗತ್ತಿಸಿರುವ ದಿ:13.06.2013ರ ಮತ್ತು ಎಫ್1-2/2016 ದಿನಾಂಕ: 11.06.2016ರ, ಯು.ಜಿ.ಸಿ. ನಿಯಮಗಳ ತಿದ್ದುಪಡಿ ಆದೇಶ. ಹಾಗೂ No. F.1-2/2017(EC/PS) 18.07.2018 ರ ಅಧಿಸೂಚನೆ.
5. ಸರ್ಕಾರದ ದಿನಾಂಕ : 25.09.2014ರ ಸಂಖ್ಯೆ: ಇಡಿ 382 ಯುಎನ್ಇ 2012ರ ಆದೇಶ.
6. ಸರ್ಕಾರದ ದಿನಾಂಕ : 19.09.2007 ರ ಸಂಖ್ಯೆ:ಇಡಿ/200/ ಯುಎನ್ಇ/2003ರ ಸುತ್ತೋಲೆ.
7. ಸರ್ಕಾರದ ದಿನಾಂಕ : 19.12.2011 ಹಾಗೂ ದಿನಾಂಕ : 05.05.2015 ರ ಸಂಖ್ಯೆ: ಇಡಿ/242/ಡಿಸಿಇ/2011 ರ ಪತ್ರ..
8. ಈ ಕಛೇರಿಯ ದಿನಾಂಕ : 31.10.2015 ರ ಸಂಖ್ಯೆ : ಕಾಶಿಇ/16/ಸಿಎಎಸ್/2015-16/ಬಸ್ಥಾವಿ ರ ಸುತ್ತೋಲೆಗಳು.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಯುಜಿಸಿ ಮಾರ್ಗಸೂಚಿಗಳು ಹಾಗೂ ಸರ್ಕಾರದ ಆದೇಶಗಳನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ/ ಸಹಾಯಕ ಪ್ರಾಧ್ಯಾಪಕರು/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಉನ್ನತ ಶೈಕ್ಷಣಿಕ ಹಂತ 11, 12, 13ಎ ಹಾಗೂ 14ರಲ್ಲಿ ಪದೋನ್ನತಿ ಮಂಜೂರು ಮಾಡಲಾಗುತ್ತಿದೆ.

ಸದರಿ ಪದೋನ್ನತಿಗೆ ಸಲ್ಲಿಸಲಾಗುವ ಪ್ರಸ್ತಾವನೆಗಳಲ್ಲಿ ಸಾಕಷ್ಟು ನ್ಯೂನತೆಗಳು ಕಂಡು ಬರುತ್ತಿದ್ದು ಆದೇಶವಾದ ನಂತರ ಮಹಾಲೇಖಪಾಲರ ಆಕ್ಷೇಪಣೆಗಳನ್ವಯ ತಿದ್ದುಪಡಿಗೆ ಮನವಿಗಳು ಸ್ವೀಕೃತವಾಗುವುದನ್ನು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪದೋನ್ನತಿಗಾಗಿ ಪ್ರಸ್ತಾವನೆ ಸಲ್ಲಿಸುವ ಅರ್ಹ ಸಹ/ ಸಹಾಯಕ ಪ್ರಾಧ್ಯಾಪಕರು/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರುಗಳ ಪ್ರಸ್ತಾವನೆಯನ್ನು ಆಯುಕ್ತರ ಕಛೇರಿಗೆ ಸಲ್ಲಿಸುವಾಗ ಸಂಬಂಧಿಸಿದ ಪ್ರಾಂಶುಪಾಲರುಗಳು ಈ ಕೆಳಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸತಕ್ಕದ್ದು.

1. ಸಹ/ ಸಹಾಯಕ ಪ್ರಾಧ್ಯಾಪಕರು/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರುಗಳ ಹೆಸರನ್ನು ನಮೂದಿಸುವಾಗ ಸದರಿಯವರ ನೇಮಕಾತಿ ಆದೇಶ ಹಾಗೂ ಸೇವಾ ಪುಸ್ತಕದಲ್ಲಿ ನಮೂದಾಗಿರುವ ಹೆಸರು ಒಂದೇ ಎಂಬುದನ್ನು ಖಚಿತಪಡಿಸಿಕೊಂಡು ನಮೂದಿಸತಕ್ಕದ್ದು.
2. ಪ್ರಸ್ತಾವನೆಯ ಭಾಗ-1ರಲ್ಲಿ ವಿವರಗಳನ್ನು ನಮೂದಿಸುವಾಗ ಅರ್ಹತಾ ದಿನಾಂಕದ ಅವಧಿಯೊಳಗೆ ಯಾವುದೇ ಅಸಾಧಾರಣ/ವಿಶೇಷ ರಜೆಗಳನ್ನು ಪಡೆದಿದ್ದಲ್ಲಿ ಸದರಿ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿ, ಅರ್ಹತಾ ದಿನಾಂಕ ಮುಂದೂಡಲ್ಪಟ್ಟಲ್ಲಿ ಸದರಿ ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.
3. ಎಫ್.ಐ.ಪಿ & ಎಫ್.ಡಿ.ಪಿ ಗೆ ನಿಯೋಜಿಲಾದ ನಿಗದಿತ ಅವಧಿಯಲ್ಲಿ ಪಿಹೆಚ್.ಡಿ ಪೂರೈಸಿರುವುದನ್ನು ಪರಿಶೀಲಿಸಿ ವಿವರಗಳನ್ನು ನಮೂದಿಸತಕ್ಕದ್ದು.
4. ಪ್ರಸ್ತಾವನೆಯಲ್ಲಿ ನೇಮಕಾತಿ ಆದೇಶದ ಪ್ರತಿ, ಸೇವಾ ಪೂರ್ವಾವಧಿ ಘೋಷಣೆ ಪ್ರತಿ, ವಿದ್ಯಾರ್ಹತೆಗಳ ಪತ್ರಗಳ/ಅಂಕಪಟ್ಟಿಗಳ ಪ್ರತಿ ಈಗಾಗಲೇ ಪಡೆದಿರುವ ಶೈಕ್ಷಣಿಕ ಹಂತದ ಮಂಜೂರಾತಿ ಆದೇಶದ ಪ್ರತಿಗಳನ್ನೊಳಗೊಂಡಂತೆ ಯುಜಿಸಿ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ನಮೂನೆಯೊಂದಿಗೆ ಭರ್ತಿ ಮಾಡಿ ದೃಢೀಕರಿಸಿ ಸಲ್ಲಿಸತಕ್ಕದ್ದು.
5. ಇಲಾಖೆಯ ಕರ್ತವ್ಯಕ್ಕೆ ಹಾಜರಾದ ದಿನಾಂಕ ಅಪರಾಹ್ನ/ಪೂರ್ವಹ್ನದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಬಗ್ಗೆ ಪೂರಕ ದಾಖಲಾತಿಗಳನ್ನು ಒದಗಿಸತಕ್ಕದ್ದು.

ಮೇಲ್ಕಂಡ ವಿವರಗಳನ್ವಯ ಸಂಬಂಧಿಸಿದ ಸಹ/ ಸಹಾಯಕ ಪ್ರಾಧ್ಯಾಪಕರು/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರುಗಳು ಹಾಗೂ ಪ್ರಾಂಶುಪಾಲರು ಕ್ರಮವಹಿಸುವಂತೆ ಸೂಚಿಸಿದೆ. ಸೂಕ್ತ ದಾಖಲೆಗಳು ಇಲ್ಲದ, ಅಪೂರ್ಣ ಮಾಹಿತಿಗಳು ಇರುವ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗುವುದು ಹಾಗೂ ಮೇಲಿನ ಅಂಶಗಳನ್ನು ಉಲ್ಲಂಘನೆ ಮಾಡಿದ ಪ್ರಾಂಶುಪಾಲರುಗಳ ಹಾಗೂ ಪ್ರಾಧ್ಯಾಪಕರು/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರುಗಳ ವಿರುದ್ಧ ಶಿಸ್ತು ಕ್ರಮಕ್ಕೈಗೊಳ್ಳಲಾಗುವುದು ಎಂದು ಸೂಚಿಸಲಾಗಿದೆ.

***(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟಿದೆ.)***

30/09/2022

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**

**ಪ್ರತಿಯನ್ನು:**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2. ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
4. ಕಛೇರಿ ಪ್ರತಿ.